(ಇ) ಸರ್ಕಾರದ ಆದೇಶವಿದ್ದರೂ ಅಕ್ರಮ ಮರಳು ಸಾಗಾಣಿಕೆ ನಿಂತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ತಪ್ಪಿತಸ್ಥರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳು ಏನು?

(ಈ) ಅಕ್ರಮ ಮರಳು ಸಾಗಾಣಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕು?

(ಉ) ನದಿ ತೀರದಲ್ಲಿ ಮರಳು ಸಾಗಾಣಿಗೆ ಪರವಾನಿಗೆ ನೀಡುವಾಗ ಇಲಾಖೆ ಅನುಸರಿಸುವ ನಿಧಿ ವಿಧಾನಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

(ಅ) ಬಂದಿದೆ.

(ಆ) ಈ ಬಗ್ಗೆ ಸರ್ಕಾರ ದಿನಾಂಕ:22-11-93ರಂದು ನಿಷೇದಾಜ್ಞೆ ಹೊರಡಿಸಿದೆ.

(ಇ) ಬಂದಿದೆ. ಇಲಾಖೆಯಿಂದ ಅನೇಕ ಬಾರಿ ದಾಳಿ ನಡೆಸಿ ಲಾರಿಗಳನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗಿದೆ.

(ಈ) ಮರಳು ಗಣಿಗಾರಿಕೆಯನ್ನು ಹರಾಜು ಮೂಲಕ ವಿಲೇ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು ಇದಾದ ನಂತರ ಅಕ್ರಮ ಸಾಗಾಣಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗುತ್ತದೆ.

(ಉ) ನದಿ ತೀರದಲ್ಲಿ ಮರಳು ಸಾಗಾಣಿಕೆ ಪರವಾನಿಗೆ ನೀಡುವಾಗ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರಲ್ಲಿ ಕಲ್ಪಿಸಿರುವ ವಿಧಿ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

ಧಾರವಾಡ ನಗರದಲ್ಲಿ ಉದ್ದಿಮೆಗಳಿಗೆ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣ

2031 (2631) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡದ ಮಹಾನಗರದ ಮಧ್ಯ ಮತ್ತು ಸುತ್ತಲಿನ ಪ್ರದೇಶದಲ್ಲಿ ಉದ್ದಿಮೆಗಳಿಗಾಗಿ ರಾಯಪುರದಲ್ಲಿ ವಶಪಡಿಸಿಕೊಂಡು ಭೂಮಿ ಎಷ್ಟು ಎಕರೆ ಹಾಗೂ ಅಭಿವೃದ್ಧಿ ಪಡಿಸಿರುವ ಪ್ಲಾಟುಗಳು ಎಷ್ಟು? (ವಿವರ ನೀಡುವುದು)

(ಆ) ಈ ಭೂಮಿ ವಶಪಡಿಸಿಕೊಳ್ಳುವ ಮೊದಲು ಮತ್ತು ಭೂಮಿ ಅಭಿವೃದ್ಧಿಪಡಿಸಿದ ನಂತರದಲ್ಲಿ ಯಾವ ಉದ್ದಿಮೆಗಳಿಗೆ ನೀಡಲಾಗಿದೆ ಹಾಗೂ ಯಾವ ಯಾವ ಉದ್ದಿಮೆಗಳಿಗಾಗಿ ಬೇಡಿಕೆ ಅತಿ ಚಿಕ್ಕ ಚಿಕ್ಕ ಅಥವಾ ಮಧ್ಯಮಗಳಿಗಾಗಿ ಇದೆ? (ವಿವರ ನೀಡುವುದು)

(ಇ) ಈ ಉದ್ದಿಮೆ ಪ್ರದೇಶದಲ್ಲಿ ಉದ್ದಿಮೆ ಕಟ್ಟಿಸಲಾಗುವುದೇ?

(ಈ) ಈ ಉದ್ದಿಮೆ ಪ್ಲಾಟುಗಳ ಸೈಟು (ಭೂಮಿ ಅಳತೆ) ಶೆಡ್ಡುಗಳ ವಿವರ ಹಾಗೂ ಗೊತ್ತುಪಡಿಸಿರುವ ಬೆಲೆಗಳನ್ನೂ ತಿಳಿಸುವುದು?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

(ಅ) ರಾಯಾಪೂರದಲ್ಲಿ 1ನೇ ಹಂತದಲ್ಲಿ 79 ಎಕರೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡು ಏಕ ಸಂಕೀರ್ಣ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ.

(ಆ) 2ನೇ ಹಂತದಲ್ಲಿ 287 ಎಕರೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡು ಅಭಿವೃದ್ಧಿ ಪಡಿಸಲಾಗುತ್ತಿದೆ.

(ಇ) ಮೊದಲನೆಯ ಹಂತದಲ್ಲಿ ಅಭಿವೃದ್ಧಿ ಪಡಿಸುವುದಕ್ಕೆ ಮೊದಲು ಆರು ಉದ್ಯಮಗಳಿಗೆ ಹಂಚಿಕೆ ಮಾಡಿರುವ ವಿವರಗಳು ಕೆಳಕಂಡಂತಿದೆ;

ಕ್ರ. ಸಂ.	ಉದ್ಯಮಿಗಳ ಹೆಸರು		ವಿಸ್ತೀರ್ಣ
1.	ಎನ್.ಜಿ.ಇಎಫ್.	-	40,035 ಚ.ಮೀ.
2.	ಇಂಡಿಯನ್ ಆಯಿಲ್ ಕಾರ್ಪೊರೇಷನ್	-	48 ಎಕರೆ 20 ಗುಂಟೆ
3.	ರಾಘವೇಂದ್ರ ಎಂಟರ್ ಪ್ರೈಸಸ್	-	2,410 ಚ.ಮೀ
4.	ಧೇಮಿಲಾ ಡೈರಿ	-	7,958 ಚ.ಮೀ
5.	ಭವಾನಿ ಎಂಟರ್‌ಪ್ರೈಸಸ್	-	9,062 ಚ.ಮೀ
6.	ಮಾಡರ್ನ್ ಮಿಲ್ಸ್	-	20 ಎಕರೆ 5 ಗುಂಟೆ

ಎರಡನೇ ಹಂತದಲ್ಲಿ 287 ಎಕರೆ ಭೂಸ್ವಾಧೀನಪಡಿಸಿಕೊಂಡು ಇದರಲ್ಲಿ ಈಗಾಗಲೇ ಅಭಿವೃದ್ಧಿ ಕಾರ್ಯಗಳು ಶೇಕಡಾ 30 ಭಾಗದಷ್ಟು ಪೂರ್ಣಗೊಂಡಿದ್ದು, ಇದರಲ್ಲಿ ಮೆ: ಐ.ಓ.ಸಿ.ಎಲ್ ಕಂಪನಿಗೆ 16 ಎಕರೆ ಮತ್ತು ಮೆ:ಚ್ಚಿ.ಎಚ್.ಪಿ.ಸಿ.ಎಲ್. ಕಂಪನಿಗೆ 15 ಎಕರೆ ಜಮೀನನ್ನು ಹಂಚಿಕೆ ಮಾಡಿರುತ್ತದೆ.

(ಇ) ಈ ಉದ್ದಿಮೆ ಪ್ರದೇಶದಲ್ಲಿ ಉದ್ದಿಮೆ ಶೆಡ್‌ಗಳನ್ನು ನಿರ್ಮಿಸಿರುವುದಿಲ್ಲ.

(ಈ) ರಾಯಚೂರ ಕೈಗಾರಿಕಾ ಪ್ರದೇಶದಲ್ಲಿ 194 ಪ್ಲಾಟುಗಳನ್ನು ವಿಂಗಡಿಸಲಾಗಿದೆ. ಸದರಿ ಜಮೀನಿನಲ್ಲಿ 10 ಗುಂಟೆಯಿಂದ 5 ಎಕರೆಯವರೆಗೆ ವಿವಿಧ ಪ್ಲಾಟುಗಳನ್ನು ವಿಂಗಡಿಸಲಾಗಿದೆ. ಹಾಗೂ ಇಲ್ಲಿ ಅತಿ ಚಿಕ್ಕ ಪ್ಲಾಟುಗಳಿಗೆ ಬೇಡಿಕೆ ಹೆಚ್ಚಾಗಿರುತ್ತದೆ. ಕೈಗಾರಿಕಾ ಪ್ರದೇಶದ ಬೆಲೆ ಎಕರೆಗೆ 10.6 ಲಕ್ಷ ಆಗಿರುತ್ತದೆ.

ಧಾರವಾಡ ನಗರದಲ್ಲಿ ಬೆಳೆಯುತ್ತಿರುವ ಬಡಾವಣೆಗಳು

2032 (2632) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡ ನಗರ ಮತಕ್ಷೇತ್ರದಲ್ಲಿ ಕಳೆದ ಹದಿನೈದು ವರ್ಷಗಳಲ್ಲಿ ಅನೇಕ ಬಡಾವಣೆಗಳು ಬೆಳೆದು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?